A5

<u>ಕರ್ನಾಟಕ ವಿಧಾನ ಪರಿಷತ್ತು</u>

<u>ಶ್ರೀಮತಿ ಹೇಮಲತಾ ನಾಯಕ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ-59ರಡಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಸಹಕಾರ ಸಚಿವರ ಹೇಳಿಕೆ.</u>

ವಿಷಯ: ಸಹಕಾರ ಮಾರಾಟ ಮಹಾಮಂಡಳ ನಿಯಮಿತ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನಿವೃತ್ತ ಅಧಿಕಾರಿ ಕೆ.ಎಂ.ಆಶಾ ಅವರನ್ನು ನೇಮಿಸಿರುವುದನ್ನು ವಿರೋಧಿಸಿರುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ಕುರಿತು.

*****

<u>ಹೇಳಿಕೆ:-</u>

ಶ್ರೀಮತಿ ಆಶಾ ಕೆ.ಎಂ. ಇವರು ಸಹಕಾರ ಸಂಘಗಳ ಸಹಾಯಕ ನಿಬಂಧಕರಾಗಿ ಇಲಾಖೆಗೆ ಸೇರಿ ಕಾಲಕಾಲಕ್ಕೆ ಬಡ್ತಿ ಪಡೆದು ಉಪನಿಬಂಧಕರಾಗಿ, ಜಂಟಿ ನಿಬಂಧಕರಾಗಿ ಮತ್ತು ಅಪರ ನಿಬಂಧಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಸದರಿ ಅಧಿಕಾರಿಯವರು ದಿನಾಂಕ:30.04.2024 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ನಿವೃತ್ತ ಅಧಿಕಾರಿಯವರು ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ಸುಮಾರು 03 ವರ್ಷಗಳವರೆಗೆ ಮೈಸೂರು ಪ್ರಾಂತದ ಸಹಕಾರ ಸಂಘಗಳ ಜಂಟಿ ನಿಬಂಧಕರಾಗಿ, 02 ವರ್ಷಗಳ ಕಾಲ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯಾಗಿ ಸಹಕಾರ ಸಚಿವಾಲಯ ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸಿರುತ್ತಾರೆ ಮತ್ತು 04 ವರ್ಷಗಳ ಕಾಲ ಕೇಂದ್ರ ಕಚೇರಿಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರು, ಪತ್ತು ಶಾಖೆಯ ಕಾರ್ಯನಿರ್ವಹಣಾ ಮುಖ್ಯಸ್ಥರಾಗಿ ಉತ್ತಮವಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಧಿಕಾರಿಯವರು ಸಹಕಾರ ಇಲಾಖೆಯಲ್ಲಿ 32 ವರ್ಷಗಳ ಅಪಾರ ಅನುಭವ ಹೊಂದಿರುತ್ತಾರೆ. ಹಾಗಾಗಿ ಇವರ ಸೇವೆಯು ಇಲಾಖೆಗೆ ಅಗತ್ಯವಿದೆ ಎಂದು ಭಾವಿಸಲಾಗಿರುತ್ತದೆ.

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 15 ರಲ್ಲಿ ನಿವೃತ್ತ ಸರ್ಕಾರಿ ನೌಕರರ ನೇಮಕಾತಿ ಮತ್ತು ಗುತ್ತಿಗೆ ಮೂಲಕ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಸದರಿ ನಿಯಮಗಳನ್ವಯ ಶ್ರೀಮತಿ.ಕೆ.ಎಂ.ಆಶಾ,ನಿವೃತ್ತ ಅಪರ ನಿಬಂಧಕರು, ಸಹಕಾರ ಸಂಘಗಳು ಇವರ ಮರುನೇಮಕಾತಿ ಕುರಿತು ಆರ್ಥಿಕ ಇಲಾಖೆ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯ/ಸಹಮತಿ ಪಡೆದು ಸಚಿವ ಸಂಪುಟದ ಅನುಮೋದನೆಯೊಂದಿಗೆ ಶ್ರೀಮತಿ ಕೆ.ಎಂ.ಆಶಾ, ನಿವೃತ್ತ ಅಪರ ನಿಬಂಧಕರು, ಸಹಕಾರ ಸಂಘಗಳು ಇವರನ್ನು ಗುತ್ತಿಗೆ ಆಧಾರದ ಮೇಲೆ 2 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಂಡು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲ ನಿಯಮಿತ, ಬೆಂಗಳೂರು ಹುದ್ದೆಗೆ ನೇಮಕ ಮಾಡಲಾಗಿದೆ.

ಸಂಖ್ಯೆ: ಸಿಒ 192 ಇಸಿಒ 2024.

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು.**